ಬಿದ್ದಿತ್ತು. ಅದನ್ನು ಕಂಡೊಡನೆ ಅಪ್ಪಾ.. ಎಂದು ಕಿರುಚಿಕೊಂಡು ನಾನು ಕುಸಿದು ಕುಳಿತೆ. ಅಮ್ಮ ಬಂದು ನನ್ನ ಪಕ್ಕದಲ್ಲಿ ಕುಳಿತು ನನ್ನನ್ನು ತಬ್ಬಿಕೊಂಡು ಅಳತೊಡಗಿದಳು. ಕೆಲ ಹೊತ್ತು ಏನಾಯಿತೆಂದು ನನಗೆ ತಿಳಿಯಲಿಲ್ಲ. ದಾದಿಯೊಬ್ಬರು ನನ್ನ ಮುಖದ ಮೇಲೆ ನೀರು ಚಿಮುಕಿಸಿದಾಗ ನನಗೆ ಎಚ್ಚರವಾಗಿ ಕಣ್ಣುಬಿಟ್ಟು ನೋಡಿದೆ. 'ಆ ಯಪ್ಪನಿಗೆ ಲಕ್ವಾ ಹೊಡೆದೈತೆ.. ಅವರ ಮಗಳಂತೆ..' ಎಂದು ಯಾರೋ ಹೆಂಗಸರು ಅಂದದ್ದು ಕೇಳಿಸಿತು.

ಅದಾದ ಮೇಲೆ ನಡೆದುಹೋಗಿರುವುದನ್ನು ಜೀರ್ಣಿಸಿಕೊಳ್ಳಲು ನನಗೆ ಮೂರ್ನಾಲ್ಕು ವಾರಗಳು ಬೇಕಾದವು. ಅಮ್ಮನ ಒಳಗೆ ಎಷ್ಟು ದುಃಖವಿತ್ತೋ ನನಗೆ ತಿಳಿದಿರಲಿಲ್ಲ. ಅವಳೇ ನನಗೆ ಧೈರ್ಯ ಹೇಳಿ ಅಪ್ಪನ ಸೇವೆಗೆ ನಿಂತಳು. ಒಂದು ಮರದ ಮಂಚವನ್ನು ಕೊಂಡು ತಂದು ನಡುಮನೆಯಲ್ಲಿ ಹಾಕಿದಳು. ಅದರ ಮೇಲೆ ಅಪ್ಪನನ್ನು ಮಲಗಿಸಿ ಅಪ್ಪನನ್ನು ಮಗುವಿನಂತೆ ನೋಡಿಕೊಳ್ಳಲು ಪ್ರಾರಂಭಿಸಿದಳು. ಅಪ್ಪ ನನ್ನನ್ನು ನೋಡಿದಾಗಲೆಲ್ಲಾ ಒಂದೇ ಕಣ್ಣಿನಲ್ಲಿ ಅಳುತಿದ್ದರು.


ರಾತ್ರಿಯ ಹೊತ್ತು ಅಮ್ಮ ದೀಪವನ್ನು ಆರಿಸುತ್ತಿರಲಿಲ್ಲ. ಮಂಚದ ಮೇಲೆ ಮಲಗಿರುತ್ತಿದ್ದ ಅಪ್ಪನ ಹತ್ತಿರವೇ ಕೆಳಗೆ ನೆಲದಲ್ಲಿ ಚಾಪೆಯ ಮೇಲೆ ಅಮ್ಮ ಮಲಗಿರುತ್ತಿದ್ದಳು. ಅವಳಿಂದ ಸ್ವಲ್ಪ ದೂರ ನಾನು ಮಲಗಿರುತ್ತಿದ್ದೆ. ನನಗೆ ಎಷ್ಟೋ ದಿನ ನಿದ್ರೆ ಬರುತ್ತಿರಲಿಲ್ಲ. ಅವರಿಬ್ಬರನ್ನು ನೋಡಿಕೊಂಡು ಸದ್ದು ಬರದಂತೆ ಒಳಗೊಳಗೇ ಬಿಕ್ಕಳಿಸುತ್ತಿದ್ದೆ. ದೇವರೇ.. ನಾವು ಏನು ತಪ್ಪು ಮಾಡಿದೆವೆಂದು ಈ ಶಿಕ್ಷೆಯನ್ನು ಕೊಟ್ಟುಬಿಟ್ಟೇ.. ಎಂದು ಮನದಲ್ಲಿಯೇ ಹಲುಬುತ್ತಿದ್ದೆ.

ನಮಗೆ ಬಂದಿದ್ದ ಕಷ್ಟ ಕಡಿಮೆಯಾಗದಿದ್ದರೂ ಕಾಲ ಸರಿದಂತೆಲ್ಲಾ ನಮ್ಮ ಮನಸ್ಸಿನಲ್ಲಿದ್ದ ಅದರ ತೀವ್ರತೆ ಕಡಿಮೆಯಾಗತೊಡಗಿತು. ನಾನು ಮತ್ತು ಅಮ್ಮ ಪರಿಸ್ಥಿತಿಯೊಂದಿಗೆ ಹೊಂದಾಣಿಕೆ ಮಾಡಿಕೊಂಡು, ಸಂಧಾನ ಮಾಡಿಕೊಂಡು ಬದುಕುವುದನ್ನು ಕಲಿತುಕೊಂಡೆವು. ಅಮ್ಮ ಪೇಟೇಬೀದಿಯಲ್ಲಿದ್ದ ನಮ್ಮ ಅಂಗಡಿಯನ್ನು ಖಾಲಿ ಮಾಡಿ ಅಲ್ಲಿದ್ದ ಬಟ್ಟೆ ಹೊಲಿಯುವ ಮೆಷಿನ್ನು ಮತ್ತು ಇತರ ಸಲಕರಣೆಗಳನ್ನು ಮನೆಗೆ ತಂದು ಮನೆಯಿಂದಲೇ ಕೆಲಸ ಶುರು ಮಾಡಿದಳು. ಅಕ್ಕಪಕ್ಕದ ಜನರು, ಮೊದಲಿನಿಂದಲೂ ಅಪ್ಪನ ಪರಿಚಯದವರು ನಮಗೆ ಬಂದಿದ್ದ ಕಷ್ಟವನ್ನು ನೋಡಿಯೋ, ಕನಿಕರದಿಂದಲೋ ಅಮ್ಮನ ಬಳಿಯಲ್ಲಿಯೇ ಬಟ್ಟೆ ಹೊಲಿಸಿಕೊಂಡು ನಮಗೂ ಸಹಾಯ ಮಾಡತೊಡಗಿದರು. ಅಮ್ಮನೂ ಶ್ರದ್ಧೆಯಿಂದಲೇ ಕೆಲಸ ಮಾಡುತಿದ್ದಳು. ನಾನು ಅವಳಿಗೆ ಸಾಧ್ಯವಾದಷ್ಟು ಸಹಾಯ ಮಾಡುತ್ತಿದ್ದೆ. ಆದರೆ ಸಂಪಾದಿಸುವ ಹಣ ನಮ್ಮ ಹೊಟ್ಟೆಗೆ ಮಾತ್ರ ಸಾಕಾಗತೊಡಗಿತು. ಇದೆಲ್ಲದರ ಮಧ್ಯೆ ಅಪ್ಪನನ್ನು ನೋಡಲು ಬರುತ್ತಿದ್ದ ನೆಂಟರು, ಪರಿಚಯದವರು 'ಬೆಂಗಳೂರಿನಲ್ಲಿ ಒಳ್ಳೆಯ ಡಾಕ್ಟರಿದ್ದಾರೆ ಅಲ್ಲಿ ತೋರಿಸಿ.. ಮೈಸೂರಿನಲ್ಲಿ ಒಳ್ಳೆಯ ಡಾಕ್ಟರಿದ್ದಾರೆ ಅಲ್ಲಿ ತೋರಿಸಿ ನೋಡಿ..' ಎಂದು ಅನುಕಂಪದಿಂದ ನೀಡುತಿದ್ದ ಸಲಹೆಗಳಿಂದ ಪ್ರಭಾವಿತಳಾಗಿ ಅಮ್ಮ ಯಾವುದೋ ಆಶಾಭಾವನೆಯಿಂದ ಬಾಡಿಗೆ ಕಾರು ಮಾಡಿಕೊಂಡು ಅಪ್ಪನನ್ನು ಕರೆದುಕೊಂಡು ಆಸ್ಪತ್ರೆಗಳನ್ನು ಸುತ್ತತೊಡಗಿದಳು. ಅಂಗಡಿಯನ್ನು ಖಾಲಿ ಮಾಡಿದ್ದರಿಂದ ಬಂದ ಅಡ್ವಾನ್ಸಿನ ಹಣ, ಅಪ್ಪ ಅಲ್ಲಿಯವರೆಗೂ ಉಳಿತಾಯ ಮಾಡಿದ್ದ ಹಣ, ಅಮ್ಮನ ಕೊರಳಿನಲ್ಲಿದ್ದ ಕರಿಮಣಿಯ ಸರದ ಚಿನ್ನದ ಗುಂಡುಗಳು, ಕಿವಿಯ ಓಲೆಗಳು, ಮೂಗಿನಲ್ಲಿದ್ದ ಮೂಗುಬೊಟ್ಟು ಎಲ್ಲವೂ ಮಾಯವಾದವು. ಅಮ್ಮನ ಪರಿಶ್ರಮವನ್ನು ನೋಡಿ ಆ ದೇವರಿಗೆ ಕರುಣೆ ಬಂದಿರಬೇಕು.. ಅಪ್ಪ ಎದ್ದು ನಿಂತುಕೊಂಡು ಎಡಗೈಯಲ್ಲಿ ಕೋಲು ಊರಿಕೊಂಡು ಬಲಗಾಲು, ಬಲಗೈ ಎಳೆದಾಡಿಕೊಂಡು ಓಡಾಡುವಷ್ಟು, ತೊದಲುತೊದಲಾಗಿ ಮಾತನಾಡುವಷ್ಟು ಚೇತರಿಸಿಕೊಂಡರು. ಅದರಿಂದಾಗಿ ಅಮ್ಮನಿಗೂ ನನಗೂ ಜೀವನದಲ್ಲಿ ಸ್ವಲ್ಪ ಭರವಸೆ ಮೂಡತೊಡಗಿತು. ನಾನು ಎರಡನೇ ಪಿಯುಸಿಯಲ್ಲಿ ಯಾವುದೇ ದರ್ಜೆಯಿಲ್ಲದೆ ಪಾಸಾದೆ. ನನಗೂ ಅದು ಮೊದಲೇ ಗೊತ್ತಿತ್ತು. ಮನೆಯ ಪರಿಸ್ಥಿತಿಯನ್ನು ನೆನೆದು ನನಗೆ ಮುಂದೆ ಓದುವ ಆಸಕ್ತಿಯಿರಲಿಲ್ಲ. ಆಸಕ್ತಿಯನ್ನು ಬೆಳೆಸಿಕೊಂಡರೂ ನನ್ನ ಅಮ್ಮನಿಗೆ ಹೊರೆಯಾಗುತ್ತದೆ ಎಂಬ ಭಯದಿಂದ ನನ್ನ ವಿದ್ಯಾಭ್ಯಾಸವನ್ನು ಕೊನೆಗೊಳ್ಳಿಸಲು ಮೊದಲೇ ನಿರ್ಧರಿಸಿಕೊಂಡುಬಿಟ್ಟಿದ್ದೆ. ಅಮ್ಮ ಫಲಿತಾಂಶ ಬಂದಾಗ ಡಿಗ್ರಿ ಕಾಲೇಜಿಗೆ ಸೇರಿಕೋ.. ಆಮೇಲೆ ನೋಡೋಣ.. ಎಂದು ಕ್ಷೀಣದನಿಯಲ್ಲಿ ನುಡಿದಿದ್ದಳು. ಆದರೆ ನನ್ನ ಮನಸ್ಸು ಒಪ್ಪಲಿಲ್ಲ. ಮನೆಯಲ್ಲಿದ್ದುಕೊಂಡು ಅಮ್ಮನಿಗೆ ಸಹಾಯ ಮಾಡುವುದೆಂದು ತೀರ್ಮಾನಿಸಿದೆ. ನನ್ನನ್ನು ಪದವೀಧರೆಯಾಗಿಸಬೇಕೆಂಬ ಅಪ್ಪನ ಕನಸು ಕನಸಾಗಿಯೇ ಉಳಿಯಿತು.

ಅದೊಂದು ದಿನ ಸೀತೆ ಊರಿಗೆ ಬಂದಿದ್ದವಳು ವಿಷಯ ತಿಳಿದು ಅಪ್ಪನನ್ನು ನೋಡಿಕೊಂಡು ಹೋಗಲು ಬಂದಿದ್ದಳು. ಮನೆಯಲ್ಲಿಯೇ ಇದ್ದ ನನ್ನನ್ನು ಕಂಡು 'ಕಾಲೇಜು ಬಿಟ್ಟುಬಿಟ್ಟೆಯಾ..' ಎಂದು ಕೇಳಿದಳು. ನಾನು ಸುಮ್ಮನೆ ಮುಗುಳ್ನಕ್ಕೆ. ಆಮೇಲೆ ಅವಳು ಹೋಗುವಾಗ ನನ್ನನ್ನು ಹೊರಗೆ ಕರೆದುಕೊಂಡು ಹೋಗಿ 'ಹೇಮಾ.. ಬೇಜಾರು ಮಾಡಿಕೊಳ್ಳದಿದ್ದರೆ ಒಂದು ಮಾತು ಹೇಳಲಾ.. ' ಎಂದು ಕೇಳಿ ನನ್ನ ಮುಖ ನೋಡಿದಳು. ನಾನು ಏನು ಎನ್ನುವಂತೆ ಅವಳ ಮುಖವನ್ನೇ ನೋಡಿದೆ. 'ಜೀವನ ಅಂದ ಮೇಲೆ ಕಷ್ಟಸುಖ ಎಲ್ಲಾ ಇರುತ್ತದೆ ಕಣೇ.. ನಾನು ಈಗಾಗಲೇ ಅನುಭವಿಸಿದ್ದೀನಿ.. ಧೈರ್ಯ ಕಳೆದುಕೊಳ್ಳದೆ ಇದ್ದರೆ ಎಲ್ಲಾ ಕಷ್ಟಗಳ ನಡುವೆಯೂ ನೆಮ್ಮದಿಯಿಂದ ಬದುಕಬಹುದು' ಎಂದಳು. ನಾನು ಅವಳು ನನ್ನ ಪರಿಸ್ಥಿತಿಯನ್ನು ಕಂಡು ಸಂತೈಸುವ ಮಾತನಾಡುತ್ತಿದ್ದಾಳೆ ಎಂದುಕೊಂಡು ತಲೆತಗ್ಗಿಸಿ ಹೂಂಗುಟ್ಟಿದೆ. 'ಈಗ ಮುಂದಕ್ಕೆ ಏನು ಮಾಡಬೇಕಂತಿದೀಯಾ..?' ಮತ್ತೆ ಪ್ರಶ್ನಿಸಿದಳು. 'ಏನೂ ಇಲ್ಲ ಕಣೇ.. ಅಮ್ಮ ಬಟ್ಟೆ ಹೊಲೀತಾರೆ.. ನಾನು ಅವರಿಗೆ ಸಹಾಯ ಮಾಡ್ತೀನಿ.' ಎಂದು ತುಸು ಲಘುವಾಗಿಯೇ ಉತ್ತರಿಸಿದೆ. 'ನಾನು ಒಂದು ಗಾರ್ಮೆಂಟ್ಸಿಗೆ ಹೋಗ್ತಾ ಇದೀನಿ.. ಎಂಟು ಸಾವಿರ ಸಂಬಳ, ಬಸ್ಸು ಪಾಸು, ಪಿ.ಎಫ್ ಎಲ್ಲಾ ಕೊಡುತ್ತಾರೆ.. ನೀನು ಬರುವುದಾದರೆ ಹೇಳು.. ನಮ್ಮ ಸೂಪರ್‌ವೈಸರ್ ಮೇಡಮ್ಮು ಬಹಳ ಒಳ್ಳೆಯವರು.. ಕಷ್ಟ ಹೇಳಿಕೊಂಡರೆ ಕೈಬಿಡೋದಿಲ್ಲಾ..' ಎಂದಳು. ಎಂಟು ಸಾವಿರ..! ಅದನ್ನು ನೆನೆದೇ ನನಗೆ ಸ್ವರ್ಗ ಕೈಗೆಟುಕಿದಂತಾಯಿತು. ಅದು ನಮ್ಮ ಬದುಕಿಗೆ ಬಹಳ ದೊಡ್ಡ ಮೊತ್ತವಾಗಿತ್ತು. ನನ್ನ ಖರ್ಚು ಕಳೆದು ಕೊನೆಗೆ ಐದು ಸಾವಿರ ಉಳಿದರೆ ಸಾಕು ಎಂದು ಯೋಚಿಸಿ 'ಸೀತಾ ತುಂಬಾ ಥ್ಯಾಂಕ್ಸು ಕಣೇ.. ಅಮ್ಮನ್ನ ಕೇಳಿ ಹೇಳ್ತೀನಿ..' ಎಂದು ಅವಳ ಕೈ ಹಿಡಿದುಕೊಂಡು ಹೇಳಿ ಕಣ್ಣುಗಳಲ್ಲಿ ನೀರು ತುಂಬಿಕೊಂಡೆ. 'ಲೇ.. ಅದಕ್ಕೆಲ್ಲಾ ಥ್ಯಾಂಕ್ಸ್ ಏನೂ ಬೇಡ.. ನಮ್ಮಂತೋರಿಗೆ ನಾವೇ ಆಗಬೇಕು.. ಬೇರೆ ಯಾರೂ ಆಗೋದಿಲ್ಲ. ಬೆಳಿಗ್ಗೆ ನಾನು ಬೆಂಗಳೂರಿಗೆ ಹೋಗ್ತೀನಿ, ಅಷ್ಟರಲ್ಲಿ ನಿಮ್ಮ ಅಮ್ಮನ್ನ ಕೇಳಿ ಹೇಳು..' ಎಂದು ನುಡಿದು ಅವಳು ಹೊರಟು ಹೋದಳು.

ಒಳಗೆ ಹೋದೆ. ಅಮ್ಮ ಸ್ಟೂಲಿನ ಮೇಲೆ ಕುಳಿತು ಕತ್ತಿನ ಸುತ್ತಲೂ ಟೇಪು ಇಳಿಬಿಟ್ಟುಕೊಂಡು ಬಟ್ಟೆ ಹೊಲಿಯುತ್ತಿದ್ದಳು. ಅಪ್ಪ ಮಂಚದ ಮೇಲೆ ಮಲಗಿದ್ದರು. ಅಪ್ಪನಿಗೆ ನಮ್ಮ ಮಾತುಗಳೆಲ್ಲವೂ ಅರ್ಥವಾಗುತಿದ್ದವು. ಅವರಿಗೆ ಪ್ರತಿಕ್ರಿಯೆ ನೀಡಲು ಆಗುತ್ತಿರಲಿಲ್ಲ ಅಷ್ಟೇ. ಅಪ್ಪನಿಗೆ ಕೇಳಿಸಬಾರದೆಂದು ಮೆಲ್ಲನೆ ಅಮ್ಮನೊಂದಿಗೆ ಮಾತು ಶುರುವಿಟ್ಟುಕೊಂಡು ಸೀತೆ ತಿಳಿಸಿದ ವಿಷಯವನ್ನು ಮೆಲುದನಿಯಲ್ಲಿ ತಿಳಿಸಿದೆ. ಅಮ್ಮ ಮುಖ ಊದಿಸಿಕೊಂಡು 'ಏನೂ ಬೇಡ' ಎಂದು ಗೊಣಗಿದಳು. 'ನಾನು ಹೋಗೇ ಹೋಗ್ತೀನಿ' ಎಂದು ತುಸು ಕೋಪದಲ್ಲಿಯೇ ನುಡಿದೆ. ಅಮ್ಮ ಮುಸಿಮುಸಿ ಅಳಲು ಶುರುಮಾಡಿ ಸೀರೆಯ ಸೆರಗಿನಿಂದ ಮುಖ ಮುಚ್ಚಿಕೊಂಡಳು. ಅದನ್ನು ನೋಡಿ ನನಗೂ ಅಳು ಬಂದಿತು. ಆಗ ಸುಮ್ಮನಾದೆ. ನನಗೆ ಬೆಳಗಾದರೆ ಸೀತೆ ಬೆಂಗಳೂರಿಗೆ ಹೋಗಿಬಿಡುತ್ತಾಳೆ.. ಅವಳು ಮತ್ತೆ ನನಗೆ ಸಿಗುತ್ತಾಳೋ ಇಲ್ಲವೋ ಎಂದು ಆತಂಕವಾಗುತಿತ್ತು.

ಮತ್ತೆ ರಾತ್ರಿ ಅಮ್ಮ ಅಪ್ಪನಿಗೆ ಊಟ ಮಾಡಿಸಿದ ನಂತರ ನಾವಿಬ್ಬರೂ ಊಟ ಮಾಡಿದೆವು. ಅಪ್ಪ ಕೋಲು ಊರಿಕೊಂಡು ಕಾಲು ಎಳೆದುಕೊಂಡು ಹೊರಗೆ ಹೋಗಿ ಕುಳಿತರು. ಅಮ್ಮ ನಡುಮನೆಯಲ್ಲಿ ಗೋಡೆಗೊರಗಿ ಕುಳಿತಿದ್ದಳು. ನಾನು ಅಮ್ಮನ ಪಕ್ಕ ಕುಳಿತು ಮತ್ತೆ 'ನಾನು ಗಾರ್ಮೆಂಟ್ಸಿಗೆ ಹೋಗ್ತೀನಿ..' ಅಂದೆ. ಅಮ್ಮ ಏನೂ ಮಾತನಾಡದೇ ಮುಖ ಬಿಗಿದುಕೊಂಡಳು. ನಾನು ನಿಧಾನವಾಗಿ ಸೀತೆ ತಿಳಿಸಿದ ಸಂಬಳ ಮತ್ತು ಎಲ್ಲಾ




**ಆ(ಕಾ)ಟ**

ಬಾಲ್ಯವೆಂಬುದು
ಹುಡುಗಾಟ
ಯೌವನವೆಂಬುದು
ಹುಡುಕಾಟ

★ **ಎಸ್.ಓಂಕಾರಯ್ಯ, ತವನಿಧಿ**